ನೂರಾರು ರಸಭರಿತ ರಾಗಗಳ ಸೀಮೆಯಲ್ಲಿ ಈ ಶೈಲಿ ಪ್ರಸ್ತುತಗೊಳ್ಳುತ್ತದೆ.ಎಲ್ಲ ರಾಗಗಳ ಪ್ರಕಾರಗಳಿಗೆ ಆಧಾರವಾಗಿರುವ 10 ಥಾಟ್ ಗಳು,60ಕ್ಕೂ ಹೆಚ್ಚು ಸೈದ್ಧಾಂತಿಕ ಪ್ರಸ್ತುತಿಯೋಗ್ಯ ಯಮನ್,ಮಾರವಾ ಮುಂತಾದ ರಾಗಗಳು–ವಿಸ್ತಾರ–ಅಲಂಕಾರ ಯೋಗ್ಯವಾದಂಥ ತ್ರಿತಾಲ್,ಝುಪ್ ತಾಲ್ ಮುಂತಾದ ತಾಲಗಳು ಈ ಶೈಲಿಯಲ್ಲಿ ಬಳಕೆಯಲ್ಲಿವೆ.ಈ ಶೈಲಿಯಲ್ಲಿ ಗೀತದ ಬಂದಿಶ್ ಮಾತ್ರ ನಿಬದ್ಧ ರೂಪದಲ್ಲಿರುತ್ತಿದ್ದು, ಉಳಿದೆಲ್ಲ ವಿಸ್ತಾರಪೂರ್ಣ ರಚನೆಗಳು ಅನಿಬದ್ಧ ರೂಪದಲ್ಲಿ ಪ್ರಸ್ತುತಗೊಳ್ಳುತ್ತವೆ.ವಿಲಂಬಿತ ಖ್ಯಾಲ್ ನ ಗತಿ ಅತಿ ವಿಲಂಬಿತವಿರುತ್ತದೆ.ಖ್ಯಾಲ್ ನ ಸ್ವರೂಪ ಅನಿಬದ್ಧ ವಿರುವುದರಿಂದ ತಾಲದ ಮೂಲ ಠೇಕಾವನ್ನು ಅವಿಚ್ಛಿನ್ನವಾಗಿ ನುಡಿಸುವುದು ಅನಿವಾರ್ಯವಾಗುತ್ತದೆ.ಇಲ್ಲಿ ಮಾರ್ಗೀ ಹಾಗೂ ದೇಶೀ ಎರಡೂ ಸಂಗೀತ ಪ್ರಕಾರಗಳು ಬಳಕೆಯಲ್ಲಿವೆ.ತಾನಸೇನ್.ಅಬ್ದುಲ್ ಕರೀಂ ಖಾನ್,ಓಂಕಾರನಾಥ್ ಠಾಕೂರ್.ಭೀಮಸೇನ್ ಜೋಶಿ ರವಿಶಂಕರ್,ಅಹ್ಮದ್ ಜಾನ್ ತಿರಖವಾ ,ಪನ್ನಾಲಾಲ್ ಘೋಷ್ ಮುಂತಾದ ಕಲಾವಿದರು ಹಿಂದುಸ್ತಾನೀ ಸಂಗೀತ ರಥದ ಸಾರಥ್ಯ ನಡೆಸಿರುತ್ತಾರೆ.

**ಕರ್ನಾಟಕಿ ಸಂಗೀತ:–** ಭರತ ,ಸಾರಂಗದೇವ, ವೆಂಕಟಮುಖಿ,ಶ್ರೀನಿವಾಸ ಮುಂತಾದ ಶಾಸ್ತ್ರಕಾರರ ಶಾಸ್ತ್ರವಿವೇಚನಾಧಾರದೊಂದಿಗೆ ದಕ್ಷಿಣ ಭಾರತೀಯ ಪ್ರಾಂತಗಳಲ್ಲಿ ಹೆಚ್ಚಾಗಿ ಪ್ರಚಾರದಲ್ಲಿರುವ ಈ ಶೈಲಿಯಲ್ಲಿ ಸ್ವರ–ಲಯಗಳಿಗೆ ಸಮ ಪ್ರಾಧಾನ್ಯತೆ ಇದ್ದು ಶಾಸ್ತ್ರಾನುಸರಣೆಗೆ ಪ್ರಾಮುಖ್ಯತೆ ಇರುತ್ತದೆ. ಈ ಶೈಲಿಯಲ್ಲಿ ಸಂತರು, ದಾಸರು, ಪಂಡಿತರುಗಳ ಭಕ್ತಿಸಾಹಿತ್ಯಪ್ರಧಾನ ಕೃತಿಗಳು ಹಾಗೂ ಹಿಂದುಸ್ತಾನೀ

ತರಾನಾವನ್ನು ಹೋಲುವ ತಿಲ್ಲಾನಾಗಳನ್ನು ಪ್ರಸ್ತುತಪ ಡಿಸಲಾಗಿತ್ತದೆ. ವೀಣೆ,ವೇಣು,ಮೃದಂಗ,ಘಟಂ,ಖಂಜೀರಾ, ಮೋರ್ಚಿಂಗ್, ವಯೋಲಿನ್,ತಂಬೂರಿ ಮುಂತಾದ ಸ್ವತಂತ್ರ ಹಾಗೂ ಸಹ ವಾದ್ಯಗಳು ಬಳಕೆಯಾಗುತ್ತವೆ.ಮುಖ್ಯ ಕಲಾವಿದರು ಹಾಗೂ ಪಕ್ಕವಾದ್ಯಗಾರರು ಹೊಂದಾಣಿಕೆಯೊಂದಿಗೆ ಸಂಗೀತ ಪ್ರಸ್ತುತಿಗೈಯ್ಯುತ್ತಿದ್ದರೂ, ಪ್ರತಿಯೊಬ್ಬರೂ ಸ್ವತ: ತಾಲದ ಎಣಿಕೆಯೊಂದಿಗೆ ಭದ್ರವಾದ ಸಂಬಂಧ ಹೊಂದಿರುತ್ತಾರೆ.

ಕರ್ನಾಟಕಿ ಪದ್ಧತಿಯಲ್ಲಿ 72 ಮೇಳಕರ್ತ ರಾಗಗಳು, ಮೋಹನ,ಖರಹರಪ್ರಿಯ ಮುಂತಾದ 484 ರಾಗ ರಾಗಿಣಿಗಳು ಸೈದ್ಧಾಂತಿಕ ಪ್ರಸ್ತುತಿಯೋಗ್ಯವಾಗಿವೆ. ಧ್ರುವ,ಮಟ್ಟ,ಅಟ,ರೂಪಕ,ಝಂಪ,ತ್ರಿಪುಟ,ಏಕ ತಾಲಗಳೆಂಬ ಸಪ್ತ ಸೂಲಾದಿ ತಾಲಗಳು ಪಂಚ ಜಾತಿ, ಪಂಚಗತಿಗಳಲ್ಲಿ ಪ್ರಸ್ತುತಗೆ ಒಳ್ಳುತ್ತವೆ .ಈ ಶೈಲಿಯು ಮುಖ್ಯವಾಗಿ ನಿಬದ್ಧ ರೂಪದಲ್ಲಿ ಪ್ರಸ್ತುತಗೊಳ್ಳುತ್ತದೆ.ಗೀತ ಪ್ರಸ್ತುತಿಯಲ್ಲಿ ಕೇವಲ ಸರಗವ್ ಹಾಗೂ ರಚನೆಗಳು ಬಳಕೆಯಾಗುತ್ತಿದ್ದು, ಆಲಾಪ, ತಾನ್ ಗಳ ಬಳಕೆ ಕಡಿಮೆ.ಎಲ್ಲ ಗೀತರಚನೆಗಳು ಬಹುಶಃ ಮಧ್ಯಲಯದಲ್ಲಿರುತ್ತವೆ. ಈ ಸಂಗೀತ ಶೈಲಿ ನಿಬದ್ಧ ಸ್ವರೂಪದ್ದಾಗಿದ್ದು ತಾಲದ ಸಾಂಗತ್ಯ ಸೌಂದರ್ಯ ವೃದ್ಧಿಗಾಗಿ ಇರುತ್ತದೆ.ಇಲ್ಲಿ ತಾಲದ ಮೂಲ ಠೇಕಾದ ಬದಲು ವಿಶೇಷ ರಚನೆಗಳನ್ನು ನುಡಿಸಿದರೂ ತೊಂದರೆಯಾಗಲಾರದು.ಇಲ್ಲಿ ರಾಗಂ,ತಾನಂ, ಪಲ್ಲವಿ, ಕೀರ್ತನೆ ಹಾಗೂ ಕೃತಿಗಳ ಪ್ರಸ್ತುತಿ ಇರುತ್ತದೆ ಬಿಡಾರಂಕೃಷ್ಣಪ್ಪ, ವೀಣೆ ಶೇಷಣ್ಣ, ಪಿಟೀಲು ಚೌಡಯ್ಯ, ಶ್ರೀಮತಿ ಎಂ,ಎಸ್, ಸುಬ್ಬಲಕ್ಷ್ಮಿ,ಬಾಲಮುರಳಿಕೃಷ್ಣ ಮುಂತಾದ ಖ್ಯಾತ ಕಲಾವಿದರು ಈ ಶೈಲಿಗೆ ಬೆಳಕು ತುಂಬಿದ್ದಾರೆ.

**ಕರ್ನಾಟಕೀ ಮತ್ತು ಹಿಂದೂಸ್ತಾನೀ ಸಂಗೀತ ಪದ್ಧತಿಗಳ ತುಲನಾತ್ಮಕ ವಿವರಣೆ**

| | |
|---|---|
| 1. ಮೂಲ ಮೂವತ್ತೆರೆಡು ಥಾಟ್‌ಗಳಲ್ಲಿ ಹತ್ತು ಥಾಟ್‌ಗಳು ಪ್ರಚಲಿತವಿರುತ್ತೆ. | ಎಪ್ಪತ್ತೆರೆಡು ಥಾಟ್‌ಗಳಲ್ಲಿ ಹತ್ತೊಂಭತ್ತು ಥಾಟ್‌ಗಳು, ಪ್ರಚಲಿತವಿರುತ್ತದೆ. |
| 2. ಪ್ರಬಂಧ ಭಾಷೆಗಳು ಹಿಂದಿ, ಬ್ರಿಜ್ ಭಾಷಾ, ಉರ್ದು, ಪಂಜಾಬಿ ಇತ್ಯಾದಿ. | ತಮಿಳು, ತೆಲಗು, ಕನ್ನಡ |
| 3. ಸ್ವರೋಚ್ಚಾರಣೆಯಲ್ಲಿ ಸ್ಥಿರತೆ ಮತ್ತು ಗಾಂಭೀರ್ಯವಿರುತ್ತದೆ. | ಚಂಚಲ ಮತತು ಚುರುಕಾಗಿರುವ |
| 4. ಶುದ್ಧಸ್ವರ ಸಪ್ತಕವು–ಬಿಲಾವಲ ಇರುತ್ತದೆ. | ಶುದ್ಧಸ್ವರ ಸಪ್ತಕವು – ಕನಕಾಂಗಿ ಇರುತ್ತದ. |
| 5. ಥಾಟ್‌ಗಳಲ್ಲಿ ಒಂದೇ ಸ್ವರದ ಎರಡು ರೂಪಗಳು ಉಪಯೋಗವಾಗುವುದಿಲ್ಲ. | ಥಾಟ್‌ಗಳಲ್ಲಿ ಒಂದೇ ಸ್ವರದ ಎರಡು ರೂಪಗಳು ಏಕಕಾಲದಲ್ಲಿ ಉಪಯೋಗವಾಗುತ್ತದೆ. |
| 7. ಗಾಯನ ಪ್ರಸ್ತುತಿಯಲ್ಲಿ ತಾಲವಾದನವು ಕೇವಲ ಸಾಂಗತ್ಯಕ್ಕೆ ಮಾತ್ರ ಉಪಯೋಗವಾಗಬೇಕಾಗುತ್ತದೆ. | ಗಾಯನ ಪ್ರಸ್ತುತಿಯಲ್ಲಿ ತಾಲವಾದವು ಸಾಂಗತ್ಯಕ್ಕಾಗಿ ಇದ್ದರೂ ಮೃದಂಗವಾದಕ ಅಥವಾ ಘಟಂವಾದಕರು ತಮ್ಮ ಕೌಶಲ್ಯ |
| 8. ರಾಗ ಪ್ರಸ್ತುತಿಗೆ ಸಮಯದ ನಿಯಮವಿರುತ್ತದೆ. | ರಾಗ ಪ್ರಸ್ತುತಿಗೆ ಸಮಯದ ನಿಯಮವಿದ್ದರೂ ಈ ನಿಯಮವನ್ನು ಅಷ್ಟೊಂದು |
| 9. ಸಂಗೀತ ಕಛೇರಿಯ ಮುಕ್ತಾಯವನ್ನು 'ಭೈರವಿ' ರಾಗದೊಂದಿಗೆ ಮಾಡುತ್ತಾರೆ. | 9. ಸಂಗೀತ ಕಛೇರಿಯ ಮುಕ್ತಾಯವನ್ನು ನಾಟ ರಾಗದಿಂದ ಪ್ರಾರಂಭಿಸಿ ಸುರುಟಿಯಿಂದ ಮುಗಿಸುತ್ತಾರೆ. |

# ಅಧ್ಯಾಯ-5

## ಸಂಗೀತದಲ್ಲಿ ತಾಲ ಮತ್ತು ಲಯದ ಮಹತ್ತ್ವ

ಸಂಗೀತದಲ್ಲಿ ಸ್ವರ ಮತ್ತು ಲಯ ಇವೆರಡೂ ಮಹತ್ತ್ವದ ಅಂಶಗಳಾಗಿವೆ. ಶೃತಿರ್ಮಾತಾ ಲಯ: ಪಿತಾ ಎಂಬ ನುಡಿಯಂತೆ ಶೃತಿ ಮತ್ತು ಲಯಗಳು ಸಂಗೀತವೆಂಬ ಮನೆತನಕ್ಕೆ ತಂದೆ ತಾಯಿಗಳಿದ್ದಂತೆ.ಸಂಗೀತದ ರಂಜಕತೆಯು ಈ ಎರಡು ಅಂಶಗಳನ್ನೇ ಅವಲಂಬಿಸಿದೆ. ಸ್ವರದ ಹುಟ್ಟಿನೊಂದಿಗೇ ಲಯವು ಬೆಳೆದು ಬಂದಿದೆ.ನಾದದ ಕಂಪನ ಸಂಖ್ಯೆಯಲ್ಲಿ ಒಂದು ನಿಯಮಿತ ಕಾಲಮಾನ ನಡೆದುಕೊಂಡು ಬರುವವರೆಗೆ ಆ ನಾದವು ಮಧುರವಾಗಿ ಕೇಳಿಬರುತ್ತದೆ.ಈ ನಿಯಮಿತ ಕಂಪನ ಸಂಖ್ಯೆಯಲ್ಲಿ ವ್ಯತ್ಯಾಸವಾದರೆ ಅದು ಅಪಸ್ವರ ಕರ್ಣ ಕಠೋರವಾಗಿ ಕೇಳತೊಡಗುತ್ತದೆ. ಹೀಗೆ ಲಯವು ಸ್ವರವನ್ನು ತನ್ನ ಮಧುರ ಬಂಧನದಲ್ಲಿ ಬಂಧಿಸಿ ಸ್ವರಕ್ಕೆ ಮಾಧುರ್ಯ ಹಾಗೂ ಬಲವನ್ನು ತಂದುಕೊಡುತ್ತದೆ.

ರಂಜನೆಯ ದೃಷ್ಟಿಯಿಂದ ನಾವು ಸಂಗೀತದ ಲಯವನ್ನು ಒಂದು ನಿಶ್ಚಿತ ಮಾತ್ರೆಗಳ ಗಣನೆಯಿಂದ ಕಾಲಚಕ್ರದಲ್ಲಿ ಬಂಧಿಸುತ್ತದೆ.ಈ ಗಣನೆಯ ಮಾಪನಕ್ಕೆತಾಲ ಎನ್ನುತ್ತಾರೆ.ರಾಗಾಲಾಪನೆಯನ್ನು ತಾಲವು ತನ್ನ ನಿಯಮಗಳಿಗೆ ಒಳಪಡಿಸಿದಾಗ ರಾಗದ ಭಾವ ರಸ ಪ್ರಭಾವವು ಒಂದು ಖಚಿತ ಲಯದ ಗತಿಯಲ್ಲಿ ಮುನ್ನಡೆದು ರಾಗದ ರಂಜಕತೆ ವರ್ಧಿಸುತ್ತದೆ.ತಾಲವಿಲ್ಲದ ಸಂಗೀತ ನೀರಸ ನಿರ್ಜೀವವೆನ್ನಿಸುತ್ತದೆ.

ಸಂಗೀತದಲ್ಲಿ ರಂಜಕತೆಯ ಹಂತಗಳು ತಾಲದ ವಿಭಿನ್ನ ಲಯಗಳನ್ನು ಅವಲಂಬಿಸಿರುತ್ತವೆ.ಸಂಗೀತವು ಅವ್ಯಾಹತವಾಗಿ ನಡೆದಾಗ ತಾಲದ ತಾಲಿ.(ಪೆಟ್ಟು),ಖಾಲಿ(ಹುಸಿ)ಗಳ ವೈಶಿಷ್ಟ್ಯಪೂರ್ಣ ಪ್ರಸ್ತುತಿ ಹಾಗೂ ವಿಶ್ರಾಂತಿ ಸ್ಥಾನಗಳನ್ನು ನಿರ್ದೇಶಿಸಿ ಸಂಗೀತದ ಮುನ್ನಡೆ ಹಾಗೂ ಕಲ್ಪನಾ ಚಾತುರ್ಯಕ್ಕೆ ಅವಕಾಶ ನೀಡುತ್ತದೆ.ಇದರಿಂದ ಸ್ವರದ ಗಾಂಭೀರ್ಯವು ಆದ್ಯಂತವಾಗಿ ಉಳಿದು ರಂಜಕತೆಯನ್ನು ನಿರಂತರವಾಗಿ ವರ್ಧಿಸುತ್ತಿರುತ್ತದೆ.ಸಹಜ ಜೀವನದಲ್ಲಿಯ ಕಾರ್ಯಚಟುವಟಿಕೆಗಳು ವಿಶ್ರಾಂತಿಗಳ ಸಮನ್ವಯದಂತೆ ಸಂಗೀತದ ಸ್ವರಗಳನ್ನು ಕ್ರಿಯಾಶೀಲಗೊಳಿಸುವುದು,ಉಚಿತ ಸಮಯದಲ್ಲಿ ಸ್ವರಗಳ ಮೇಲೆ ವಿಶ್ರಾಂತಿ ತೆಗೆದುಕೊಳ್ಳುವುದು ,ಪುನಃ ಮುನ್ನಡೆಸುವುದು ಇವು ಸಂಗೀತದ ರಂಜಕತೆಯ ದೃಷ್ಟಿಯಿಂದ ಮಹತ್ತ್ವದ ಅಂಶಗಳಾಗಿದ್ದು ಈ ಅಂಶಗಳು ತಾಲ-ಲಯಗಳ

ಉಪಸ್ಥಿತಿಯಲ್ಲಿ ಮಾತ್ರ ಸಾಧ್ಯವಾಗಿದೆ.ಇದರಿಂದ ಗೃಹ, ಅಂಶ, ನ್ಯಾಸ, ಗತಿ, ವಿಶ್ರಾಂತಿಸ್ಥಾನ ಇತ್ಯಾದಿಗಳು ನಿಯಮಬದ್ಧವಾಗಿ ನಡೆದು ಸ್ವರಗಳಲ್ಲಿಯ ಶೈಥಿಲ್ಯ ದೂರವಾಗಿ ರಾಗರಚನಾಕ್ರಮದಲ್ಲಿ ಗಾಂಭೀರ್ಯ ತುಂಬಿಕೊಳ್ಳುತ್ತದೆ.ಸಂಗೀತ ಪ್ರಸ್ತುತಿಯಲ್ಲಿ ತಾಲದ ಸಮ್ ನಿಂದ ರಾಗದ ಕಲ್ಪನೆಯು ಸ್ಫುಟಗೊಂಡು ಕೇಳುಗರಲ್ಲಿ ಭಾವ ತನ್ಮಯತೆ ಉಂಟಾಗುತ್ತದೆ.

ಒಂದು ರಾಗವನ್ನು ಬೇರೆಬೇರೆ ತಾಲ ಲಯಗಳಲ್ಲಿ ಹಾಡುವ ಮೂಲಕ ರಾಗದ ರಸ ಭಾವವು ವಿಭಿನ್ನ ರೀತಿಗಳಲ್ಲಿ ಪರಿಣಾಮಕಾರಿಯಾಗಿ ಪ್ರಕಟಗೊಳ್ಳುತ್ತದೆ.ಪ್ರಸಕ್ತ ಹಿಂದುಸ್ತಾನೀ ಖ್ಯಾಲ್ ಪದ್ಧತಿಯಲ್ಲಿ ಬಡಾಖ್ಯಾಲ್ ಮತ್ತು ಛೋಟಾಖ್ಯಾಲ್ ಎಂದು ಎರಡು ಪ್ರಕಾರಗಳಿದ್ದು ವಿಲಂಬಿತ ಲಯದಲ್ಲಿ ಏಕತಾಲ್, ತ್ರಿತಾಲ್, ಝೂಮ್ರಾ, ಆಡಾಚೌತಾಲ್, ಮುಂತಾದ ತಾಲಗಳಲ್ಲಿ ಸವಿಸ್ತಾರವಾಗಿ ರಾಗಪ್ರಸ್ತುತಿಗೊಳಿಸುವ ಕ್ರಮವು ಬಡಾಖ್ಯಾಲ್ ಎಂದು ಕರೆಯಿಸಿಕೊಳ್ಳುತ್ತದೆ.ಇದು ಮನಸ್ಥಿರತೆಯನ್ನು ವ್ಯಕ್ತಪಡಿಸುವ ಮಾಧ್ಯಮವಾಗಿದ್ದು ಶಾಂತ ಮತ್ತು ಗಂಭೀರರಸಾಭಿವ್ಯಕ್ತಿಗೆ ಪೂರಕವಾಗಿದೆ.ದೃತ್ ಲಯದಲ್ಲಿ ತೀನತಾಲ್.ಏಕತಾಲ್, ಇತ್ಯಾದಿ ತಾಲಗಳಲ್ಲಿ ರಾಗ ಪ್ರಸ್ತುತಿ ಕ್ರಮವು ಛೋಟಾಖ್ಯಾಲ್ ಎನ್ನಿಸಿಕೊಳ್ಳುತ್ತಿದ್ದು ಇದರಲ್ಲಿ ವೀರ, ಶೃಂಗಾರ, ರೌದ್ರಾದಿ ರಸಗಳು ಅಭಿವ್ಯಕ್ತಗೊಳ್ಳುತ್ತವೆ. ತಾಲಗಳಷ್ಟೇ ಅಲ್ಲದೇ ತಾಲ ವಾದ್ಯವಾದಕರು ಸಾಥ್ ಸಂಗತ್ ನಲ್ಲಿ ನುಡಿಸುವ ಮುಖಡಾ, ಟುಖಡಾ ಮುಂತಾದ ರಚನೆಗಳು ಸಂಗೀತವನ್ನು ಶೃಂಗಾರಮಯಗೊಳಿಸುತ್ತವೆ. ತಾಲವು ರಾಗ ರಚನಾಕ್ರಮದ ಪ್ರಾಣವಾಗಿದೆ. ಪಾಶ್ಚಿಮಾತ್ಯ ಸಂಗೀತಕ್ಕೆ ವ್ಯತಿರಿಕ್ತವಾಗಿ ಭಾರತೀಯ ಸಂಗೀತದಲ್ಲಿ ತಾಲವು ಅತ್ಯಂತ ಮಹತ್ತ್ವದ ಸ್ಥಾನ ಹೊಂದಿದೆ.

ತಂತಿವಾದ್ಯ, ನೃತ್ಯಗಳಲ್ಲಿಯ ಗತ್ ತೋಡಾ,ಝಾಲಾ,ಪರನ್,ತತ್ಕಾರ್ ಈ ಎಲ್ಲ ರಚನೆಗಳು ತಾಲ ಮತ್ತು ಲಯಕ್ಕೆ ನಿಕಟವರ್ತಿಯಾಗಿ ನುಡಿಸುವ ವಿಷಯಗಳಾಗಿವೆ

ಈ ರೀತಿ ಸಂಗೀತದಲ್ಲಿ ಪರಿಪೂರ್ಣತೆ ಎಂಬುದು ತಾಲ ಮತ್ತು ಲಯಗಳ ಸಮನ್ವಯಾತ್ಮಕ ಪ್ರಸ್ತುತಿಯಿಂದ ಮಾತ್ರ ಸಾಧ್ಯ.

# ಅಧ್ಯಾಯ–6

## ಸಂಗೀತಜ್ಞರ ಜೀವನ ಚರಿತ್ರೆಗಳು ಹಾಗೂ ಸಂಗೀತ ಕ್ಷೇತ್ರಕ್ಕೆ ಅವರ ಕೊಡುಗೆಗಳು

### ಭರತಮುನಿ

ಈ ಗ್ರಂಥದ ರಚನೆಯ ಕಾಲದ ವಿಷಯವಾಗಿ ಅನೇಕ ಮತಗಳುಂಟು ಆದರೆ ಬಹಳಷ್ಟು ಹೇಳಿಕೆಯಂತೆ ಈ ಗ್ರಂಥದ ರಚನೆಯ ಕಾಲ 5ನೇ ಶತಾಬ್ದಿ ಎಂದು ಹೇಳಿ ಒಪ್ಪಿಕೊಂಡಿದ್ದಾರೆ. ಈ ಗ್ರಂಥವು ವಿಶೇಷವಾಗಿ ನಾಟ್ಯಗೋಸ್ಕರವಾಗಿ ಬರೆಯಲ್ಪಟ್ಟಿದೆ. ಆದರೆ ಈ ಗ್ರಂಥದ ಕೊನೆಯ 6 ಅಧ್ಯಾಯಗಳಲ್ಲಿ ಸಂಗೀತದ ವಿಷಯುಗಳ ಮೇಲೆ ಬೆಳಕು ಚೆಲ್ಲಲ್ಪಟ್ಟಿದೆ. ಇದರಿಂದ ಸ್ಪಷ್ಟ ವಾಗಿ ಕಂಡುಬರುವುದೇನೆಂದರೆ. ಆ ಕಾಲದ ಸಂಗಿತ ಸಂಬಂಧ ನೃತ್ಯದೊಂದಿಗೆ ಘನಿಷ್ಠವಾಗಿತ್ತು. ನಾಟ್ಯ ಶಾಸ್ತ್ರದಲ್ಲಿ ಕೆಳಗೆ ಕಾಣಿಸಿದ ವಿಷಯ ದೊರೆಯುತ್ತದೆ.

ಭರತನು ಮಧ್ಯಮ ಮತ್ತು ಷಡ್ಜ ಗ್ರಾಮಗಳ ವರ್ಣನೆಯನ್ನು ಮಾತ್ರ ಮಾಡಿದ್ದಾನೆ. ಇದರ ಉಲ್ಲೇಖವು ಸಹ ಇಲ್ಲ. ಏಕೆಂದರೆ ಗಾಂಧಾರ ಗ್ರಾಮ ಗಂಧರ್ವರೊಂದಿಗೆ ಸ್ವರ್ಗಕ್ಕೆ ಹೋಗಿದ್ದರಿಂದ ಅದರ ಉಲ್ಲೇಖಕ್ಕೆ ಹೋಗಿಲ್ಲವೆಂದು ಹೇಳುತ್ತಾನೆ. ಷಡ್ಜ ಗ್ರಾಮದ ಏಳು ಹಾಗೂ ಮಧ್ಯಮ ಗ್ರಾಮದ ಹನ್ನೊಂದು ಒಟ್ಟಿಗೆ ಹದಿನೆಂಟು ಜಾತಿ ಒಪ್ಪಿಕೊಂಡಿದ್ದಾನೆ. ಹದಿನೆಂಟು ಜಾತಿಗಳನ್ನು ಮತ್ತೆ ಎರಡು ಭಾಗಗಳಲ್ಲಿ ವಿಂಗಡಿಸಿದ್ದಾನೆ, 1. ಶುದ್ಧ 2. ವಿಕೃತ ಶುದ್ಧ ಜಾತಿಗಳಲ್ಲಿ 7 ಹಾಗೂ ವಿಕೃತ ಜಾತಿಗಳಲ್ಲಿ 11 ಜಾತಿಯ 10 ಲಕ್ಷಣಗಳು ಹೀಗಿವೆ. ಗ್ರಹ, ಅಂಶ, ತಾರ, ಮಂದ್ರ, ನ್ಯಾಸ, ಉಪನ್ಯಾಸ, ಅಲ್ಪತ್ವ. ಬಹುತ್ವ, ಷಾಡತ್ವ, ಔಡತ್ವ ಭರತನು 22 ಶೃತಿಗಳ ಮೇಲೆ ಶುದ್ಧಸ್ವರಗಳನ್ನು 4,3,2,4,4,3,2 ಶೃತ್ಯಂತರಗಳಲ್ಲಿ ಸ್ಥಾಪಿಸಿದ್ದಾನೆ.

### ಸಾರಂಗದೇವ



ಸಾರಂಗದೇವನು 13ನೇ ಶತವಮಾನದ ಉತ್ತರಾರ್ಧದಲ್ಲಿ ದೇವಗಿರಿ (ದೌಲತಾಬಾದ) ರಾಜನ ಆಸ್ಥಾನದಲ್ಲಿ ಸಂಗೀತಗಾರ ಮತ್ತು ಸಂಗೀತಜ್ಞ, ಇತನು ಬರೆದ ಸಂಗೀತರತ್ನಾಕರ ಉತ್ತರಾದಿ ಮತ್ತು ದಕ್ಷಿಣಾದಿ ಸಂಗೀತ ಈ ಎರಡು ಪ್ರಕಾರದ ಪದ್ಧತಿಗೆ ಆಧಾರ

ಗ್ರಂಥವೆಂದು ಪರಿಗಣಿಸಲ್ಪಟ್ಟಿದೆ. ಇದರಲ್ಲಿ ಏಳು ಅಧ್ಯಾಯಗಳಿವೆ.

ಹಾಡುಗಾರಿಕೆ, ವಾದ್ಯಗಾರಿಕೆ, ನೃತ್ಯ ಈ ಮೂರು ಪ್ರಕಾರಕ್ಕೂ ಸಂಬಂಧಿಸಿದ ಪಾರಿಭಾಷಿಕ ಶಬ್ದಗಳ ಮೇಲೆ ಬೆಳಕು ಚೆಲ್ಲಿದ್ದಾನೆ. ಈತನ ಮೇಲೆ ಮಹರ್ಷಿ ಭರತನು ಗಾಢವಾಗಿ ಪ್ರಭಾವ ಬೀರಿದ್ದಾನೆ. ಆದರೆ ಈತನು ತನ್ನ ಮೌಲಿಕತೆ ಮತ್ತು ಪ್ರತಿಭೆಯಿಂದ ವಿಜೃಂಭಿಸಿದ್ದಾನೆ. ಸಾರಾಣಾಚುತಷ್ಠಿಯ ಮೂರ್ಛನೆ, ಮಧ್ಯಮ ಗ್ರಾಮದ ಲೋಪ(ತ್ಯಾಗ) ಹಾಗೂ ಅನೇಕ ವಿಕೃತ ಸ್ವರಗಳ ಪ್ರಾಪ್ತಿಯಲ್ಲಿ ಈ ಗ್ರಂಥ ತೇಲಿ ನಿಲ್ಲುತ್ತದೆ.

ಸಂಗೀತ ರತ್ನಾಕಾರದ ಮೊದಲ ಅಧ್ಯಾಯ (ಸ್ವರಾಧ್ಯಾಯ)ದಲ್ಲಿ ನಾದದ ಮುಖ್ಯ ಉತ್ಪತ್ತಿ ಮತ್ತು ಬೇಧ ಸಾರಣಾ ಚತುಷ್ಠಯಿ, ಗ್ರಾಮ, ಮೂರ್ಛನೆ, ವರ್ಣ, ಅಲಂಕಾರ, ಮತ್ತು ಜಾತಿಯ ವಿಸ್ತೃತ ವರ್ಣನೆ ಸಿಗುತ್ತದೆ. ಈತನು ರೂಪಾ 22 ಶೃತಿಗಳಿವೆ ಎಂದು ಖಚಿತ ಪಡಿಸಿದ್ದಾನೆ. ಅಲ್ಲದೆ ಏಳು ಶುದ್ಧ ಸ್ವರಗಳನ್ನು ಒಪ್ಪಿಕೊಂಡಿದ್ದಾನೆ. ಈತನು ಚಲ ಮತ್ತು ಅಚಲ ಎಂಬ ಎರಡು ವೀಣೆಗಳನ್ನು ತೆಗೆದುಕೊಂಡು ಈ ಎರಡು ವೀಣೆಗಳ ಆಕಾರ ಒಂದೇ ಬಗೆಯಾಗಿದ್ದು. ಈ ವೀಣೆಗಳಿಗೆ 21 ತಂತಿಗಳನ್ನು ಹಾಕಿ, ಒಂದು ವೀಣೆಯನ್ನು ಪ್ರಮಾಣಗೋಸ್ಕರ ಇಟ್ಟು, ಮತ್ತೊಂದು ವೀಣೆಯ ಮೇಲೆ ಪ್ರಯೋಗ ಮಾಡಿ ಏಳು ಶುದ್ಧ ಸ್ವರಗಳನ್ನು ಸ್ಥಾಪನೆ ಮಾಡಿದನು. ಈ ಪದ್ಧತಿಗೆ ಸಾರಾಣ, ಚತುಷ್ಠಾಯಿ ಎನ್ನುವರು. ಎಲ್ಲ ಮೂರ್ಧನೆಗಳನ್ನು ಷಡ್ಜ ಗ್ರಾಮದಲ್ಲಿ ಸೇರಿಸಿದನು. ಪ್ರತಿಯೊಂದು ಮೂರ್ಛನೆಯನ್ನು ಷಡ್ಜಗ್ರಾಮದಿಂದ ಪ್ರಾರಂಭಿಸಿದನು. ಅವನಿಗೆ ವಿಕೃತ ಸ್ವರಗಳು ದೊರಕಿದವು. ಅವನ ಸಮಯದಲ್ಲಿ ಕೇವಲ 2 ವಿಕೃತ ಸ್ವರಗಳಿದ್ದವು. ಯಾವುದೇ ಶುದ್ಧ ಸ್ವರ ತನ್ನ ಮೂಲಸ್ಥಾನದಿಂದ ಸ್ಥಾನಪಲ್ಲಟ ಮಾಡಿದರೆ ಅಂತಹ ಸ್ವರಗಳಿಗೆ ಕೋಮಲಸ್ವರ ಎನ್ನುತ್ತಾರೆ. ಇದನ್ನು ಸಾರಂಗದೇವನು ಒಪ್ಪಿಕೊಳ್ಳುತ್ತಾನೆ. ಅಲ್ಲದೆ ಈತನು ಯಾವುದೇ ಸ್ವರ ತನ್ನ ಮೂಲಸ್ಥಾನದಲ್ಲಿಯೇ ಇದ್ದು ಕೇವಲ ಅದರ ಅಂತರಾಳ ಬೇರೆಯಾದರೆ ಅಂತಹ ಸ್ವರಗಳಿಗೂ ಕೂಡಾ ಕೋಮಲಸ್ವರವೆಂದು ಕರೆದಿದ್ದಾನೆ. ಎರಡನೇಯ ರಾಗ ವಿವೇಕಾಧ್ಯಾಯದಲ್ಲಿ 264 ರಾಗಗಳ ವರ್ಣನೆ ಸಿಗುತ್ತದೆ. ಎಲ್ಲಾ ರಾಗಗಳನ್ನು ಹತ್ತು ಭಾಗಗಳಲ್ಲಿ ವಿಂಗಡಿಸಿದ್ದಾನೆ.

1) ಗ್ರಾಮರಾಗದ 30, 2) ರಾಗದ 20, 3) ಉಪರಾಗದ 8, 4) ರಾಗಾಂಗದ 8, 5) ಭಾಷಾಂಗದ 21, 6) ಕ್ರಮಾಂಗದ 12, 7) ಉಪಾಂಗದ 3, 8) ಭಾಷಾದ

96, 9) ವಿಭಾಷದ 20, 10) ಅಂತರಭಾಷದ 4, ಈ 264 ರಾಗಗಳ ವಿಷಯವಾಗಿ ಸಂಗೀತಜ್ಞರಲ್ಲಿ ಮತಭೇದವಿದೆ.

ಮೂರನೆಯ ಪ್ರಕಿರಣಕ ಅಧ್ಯಾಯದಲ್ಲಿ ವಾಗ್ಗೇಕಾರರ 28 ಗುಣಗಳ ವಿಶ್ಲೇಷಣೆ ಸಿಗುತ್ತದೆ. ಅದಲ್ಲದೆ ಹಾಡುಗಾರರ ಗುಣದೋಷಗಳ ಕುರಿತು ವಿವರಿಸಿದ್ದಾನೆ. ನಾಲ್ಕನೆಯ, ಪ್ರಬಂಧ ಅಧ್ಯಾಯದಲ್ಲಿ ಸಾರಂಗದೇವನು ಪ್ರಬಂಧ ವಿಷಯವಾಗಿ ವಿವರಿಸಿದ್ದಾನೆ. ದೇಶಿಸಂಗೀತ, ಮೂರ್ಗಿ ಸಂಗೀತ, ನಿಬದ್ಧ ಮತ್ತು ಅನಿಬದ್ಧಗಾನ, ರಾಗ ಅಲಾಪ, ರೂಪಕ ಅಲಾಪ, ಅಲಿಪ್ತಿಗಾನ, ಸ್ವಸ್ಥಾನ ನಿಯಮದ ಅಲಾಪ, ಅಲ್ಪತ್ವ, ಬಹುತ್ವ, ಮುಂತಾದವುಗಳ ಮೇಲೆ ಕ್ಷ-ಕಿರಣ ಬೀರಿದ್ದಾನೆ.

5ನೇ ಅಧ್ಯಾಯ ತಾಳಾಧ್ಯಾಯ : ಇದರಲ್ಲಿ ತನ್ನ ಕಾಲದಲ್ಲಿ ಪ್ರಚಲಿತದಲ್ಲಿದ್ದ ತಾಳಗಳ ಮೇಲೆ ವಿಚಾರ ಹರಿಸಿದ್ದಾನೆ.

6ನೇ ಅಧ್ಯಾಯ : ವಾದ್ಯ ಅಧ್ಯಾಯ ಇದರಲ್ಲಿ ಆತನು ಎಲ್ಲಾ ವಾಧ್ಯಗಳನ್ನು ನಾಲ್ಕು ಭಾಗಗಳಲ್ಲಿ ವಿಂಗಡಿಸಿದ್ದಾನೆ. ತತ್, ಸುಷಿರ, ಅವನದ್ಧ ಮತ್ತು ಘನ ಎಂಬುದಾಗಿ ವಿಂಗಡಿಸಿದ್ದಾನೆ.

7ನೇ ಅಧ್ಯಾಯದಲ್ಲಿ ಆತನು ನೃತ್ಯ, ನಾಟ್ಯ ಈ ವಿಷಯಗಳ ಮೇಲೆ ಬೆಳಕು ಚಲ್ಲಿದ್ದಾನೆ.

**ಹಜರತ್ ಅಮೀರಖುಸ್ರೋ:**



ಅಮಿರ ಖುಸ್ರೋನ ಪೂರ್ವಜರು ಖುರಾಸನ ಎಂಬ ದೇಶದಿಂದ ಭಾರತಕ್ಕೆ ಬಂದು ನೆಲೆಸ ತೊಡಗಿದರು. ಕ್ರಿ. ಶ. 1253 ರಲ್ಲಿ ಏಟಾ ಜಿಲ್ಲೆಯ ಪತಿಯಾಲಿ ಎಂಬ ಹಳ್ಳಿಯಲ್ಲಿ ಕಲಾಪ್ರೇಮ ಮತ್ತು ಕಾವ್ಯ ರಸಿಕತೆಗಳು ಸಂಗಮವಾಗಿರುವ ಕುಟುಂಬದಲ್ಲಿ ಅಮೀರಖುಸ್ರೋನ ಜನ್ಮವಾಯಿತು.

ಅಮೀರ ಖುಸ್ರೋನು ಅತ್ಯಂತ ತೀಕ್ಷ್ಣ ಬುದ್ಧಿಯುಳ್ಳವನು. ಪ್ರತಿಭಾ ಸಂಪನ್ನನು ಆಗಿದ್ದನು. ತಂದೆಯ ಮರಣನಂತರ ತತ್ಕಾಲೀನವಾಗಿ ಗುಲಾಮರ ವಶದಲ್ಲಿದ್ದ ಗ್ಯಾಸುದ್ದಿನ ಬಲ್ಬನ್ನನ ದರಬಾರಿನಲ್ಲಿ ನೌಕರನಾದನು. ದರಬಾರಿನಲ್ಲಾಗುವ ಕಲಾತ್ಮಕ ಚಟುವಟಿಕೆಗಳ ಪ್ರಭಾವವು ತೀವ್ರವಾಗಿ ಖುಸರೋನ ಮೇಲಾಯಿತು.

ಅಲ್ಲಿ ಅವನ ವಂಶಗತವಾಗಿ ಬಂದ ಸಾಹಿತ್ಯ, ಕಾವ್ಯ ಮತ್ತು ಸಂಗೀತ ಈ ಗುಣಗಳಿಗೆ ಪ್ರೋತ್ಸಾಹ ದೊರೆಯಿತು. ಈ ಮೂರು ಕಲಾಕ್ಷೇತ್ರಗಳಲ್ಲಿ ತನ್ನ ಸ್ವಾಭಾವಿಕ ಗುಣಗಳಾದ ಅಪೂರ್ವ ಬುದ್ಧಿ ಚಾತುರ್ಯ ಮತ್ತು ಕಲ್ಪನಾ ವಿಲಾಸಗಳಿಂದ ಅವನು ಪ್ರಗತಿ ಹೊಂದಿದನು. ರಾಜತಾಂತ್ರಿಕ ಕ್ಷೇತ್ರಕ್ಕಿಂತಲೂ ಕಲಾಕ್ಷೇತ್ರಗಳಲ್ಲಿಯೇ ಅಧಿಕವಾಗಿ ಇವನ ಗಮನವು ಸೆಳೆಯಲ್ಪಟ್ಟಿತು.

ಕೆಲ ಕಾಲದವರೆಗೆ ರಾಜತಾಂತ್ರಿಕ ಕಾರ್ಯಗಳಿಗಾಗಿ ಅವನಿಗೆ ಮುಲ್ತಾನ, ಪರ್ಶಿಯಾ, ಇರಾಣ ಇತ್ಯಾದಿ ದೇಶಗಳಲ್ಲಿರುವ ಪ್ರಸಂಗಗಳು ಬಂದೊದಗಿದವು. ಇವನು ತನ್ನ ಗುಣ ಗ್ರಾಹಕ ಸ್ವಭಾವದ ಮೂಲಕ ಅಲ್ಲಿಯ ಸಾಹಿತ್ಯ ಮತ್ತು ಸಂಗೀತಗಳನ್ನು ಅವಗತಗೊಳಿಸಿಕೊಂಡನು.

ಪುನಃ ಭಾರತಕ್ಕೆ ಮರಳಿ ಬಂದಾಗ ಅಮೀರ ಖುಸ್ರೋನ ಸಾಹಿತ್ಯ ಕಾವ್ಯ ಮತ್ತು ಸಂಗೀತ ಕಲಾಗುಣಗಳ ಪ್ರಭಾವವು ವಿಶೇಷ ರೂಪದಿಂದ ಪ್ರಕಟವಾಗತೊಡಗಿದವು.

ಇವನು ಅಲ್ಲಾವುದ್ದೀನ ಖಿಲ್ಜಿಯ ದರಬಾರನಲ್ಲಿರುವಾಗ ಕ್ರಿ. ಶ. 1294ರಲ್ಲಿ ಅಲ್ಲಾವುದ್ದಿನನು ದಕ್ಷಿಣದ ದೇವಗಿರಿ ರಾಜ್ಯವನ್ನು ವಶಪಡಿಸಿಕೊಂಡನು. ದಕ್ಷಿಣಕ್ಕೆ ಅಲ್ಲಾವುದ್ದಿನೊಂದಿಗೆ ಅಮೀರಖುಸ್ರೋ ಸಹ ಹೋಗಿದ್ದನು. ದೇವಗಿರಿಯಲ್ಲಿಯ ಪಂಡಿತ ಮತ್ತು ಸಂಗೀತಜ್ಞನಾದ ಗೋಪಾಲನಾಯಕನೊಂದಿಗೆ ಅಮೀರ ಖುಸ್ರೋ ಸ್ನೇಹವು ಬೆಳೆಯತೊಡಗಿತು. ಅಲ್ಲದೆ ಗೋಪಾಲ ನಾಯಕನಿಂದ ಇವನಿಗೆ ಭಾರತೀಯ ಸಂಗೀತವನ್ನರಿಯಲು ಸಹಾಯವಾಗಿ ಅವನ ಸಂಗೀತಾಭ್ಯಾಸಕ್ಕೆ ವಿಶೇಷವಾದ ಗತಿಯು ದೊರೆಯಿತು.

ಅಮೀರಖುಸ್ರೋನು ಮೇಲ್ಮಟ್ಟದ ಸಂಗೀತಜ್ಞನು, ಗಾಯಕನೂ ಮತ್ತು ಕವಿಯು ಆಗಿದ್ದನು. ಭಾರತೀಯ ಮತ್ತು ಫಾರಸಿ ಸಾಹಿತ್ಯಗಳ ಆಧಾರಗಳಿಂದ "ಸಾಜಗಿರಿ, ಕುಶ್ಯಾಕ, ಯಮನ, ಝೀಲಫ, ಸರ ಪರ್ದಾ ಇತ್ಯಾದಿ ರಾಗಗಳ ನಿರ್ಮಿತಿಯ ಶ್ರೇಯಸ್ಸು ಅಮೀರ ಖುಸ್ರೋನಿಗೆ ಸಲ್ಲುತ್ತದೆ. ಅದೇ ರೀತಿಯಾಗಿ ಸೂಲಫಾಕ್ತಾ, ಪಸ್ತೊ ಇತ್ಯಾದಿ ತಾಲಗಳು ಇವನಿಂದಲೇ ರಚಿಸಲಾಗಿವೆ ಎಂದು ಹೇಳಲಾಗುವುದು. ಅಲ್ಲದೇ ವೀಣಾ ವಾದ್ಯದಿಂದ ಸಿತಾರ ಮತ್ತು ಮೃದಂಗದಿಂದ ತಬಲ ವಾದ್ಯಗಳನ್ನಾಗಿ ಪರಿವರ್ತಿಸಿದ ಶ್ರೇಯಸ್ಸು ಅಮೀರ ಖುಸ್ರೋನಿಗೆ ಸಲ್ಲುವುದು.

ಖಯಾಲ, ತರಾನಾ, ಕವ್ವಾಲಿ, ಗಾಯನ ಶೈಲಿಗಳು ಕೂಡಾ ಇವನಿಂದಲೇ ಅವಿಷ್ಕಾರ ಆಗಿವೆ."

ಕ್ರಿ. ಶ. 1324 ರಲ್ಲಿ ಖುಸ್ರೋನ ಗುರುವಾದ "ನಿಜಾಮುದ್ದಿನ ಔಲಿಯಾ"ನ ದೇಹಾಂತವಾಯಿತು. ಈ ಸುದ್ದಿಯನ್ನು ಕೇಳಿ ಅಮಿರಖುಸ್ರೋನ ಮೇಲೆ ಮಾನಸಿಕ ಪರಿಣಾಮ ಉಂಟಾಯಿತು. ಮುಂದೆ ಕೆಲವೇ ದಿನದಲ್ಲಿ ಇವನ ಅಂತ್ಯವಾಯಿತು.

**ಮಿಯಾ ತಾನಸೇನ**



ತಾನಸೇನನ ಹೆಸರು ಕೇಳದವರಾರು? ಸಂಗೀತಗಾರರಷ್ಟೇ ಅಲ್ಲ, ಜನಸಾಮಾನ್ಯರೂ ಸಹ ತಾನಸೇನರ ಹೆಸರು ಬಲ್ಲರು. ತಾನಸೇನ ಸಂಗೀತಕ್ಕಾಗಿಯೇ ಜನ್ಮ ತಳೆದ ಒಬ್ಬ ಅಸಾಮಾನ್ಯ ವ್ಯಕ್ತಿ. ಸಂಗೀತ ಇರುವತನಕ ಅವನ ಹೆಸರು ಅಮರ. ತಾನಸೇನ ಸಂಗೀತಕ್ಕೊಂದು ಪರ್ಯಾಯ ಹೆಸರು. 'ಸಾವಿರ ವರ್ಷಗಳಲ್ಲಿ ಅಂಥ ಸಂಗೀತಗಾರ ಹುಟ್ಟಿಲ್ಲ' ಎಂದು ಇತಿಹಾಸಕಾರ ಅಬುಲ್‌ಫಜಲ್ ತನ್ನ 'ಐನ್- ಈ-ಅಕ್ಬರಿ'ಯಲ್ಲಿ ಹೇಳಿರುವ ಮಾತು ಅಕ್ಷರಸಃ ಸತ್ಯ.

ಮಹಾನ್‌ಪುರುಷರ ಬದುಕಿನ ಸಂಗತಿಗಳು ಅಸ್ಪಷ್ಟ ಹಾಗೂ ಅಲಭ್ಯ. ಅಂತೆಯೇ ತಾನಸೇನನ ಜೀವನ ಚರಿತ್ರೆಯೂ ಇದಕ್ಕೆ ಹೊರತೇನಲ್ಲ. ತಾನಸೇನನ ಹುಟ್ಟಿನ ಬಗೆಗೆ ಅನೇಕ ಅಭಿಪ್ರಾಯಗಳಿವೆ. ಒಂದು ಅಭಿಪ್ರಾಯದ ಪ್ರಕಾರ ತಾನಸೇನ ಹುಟ್ಟಿದ್ದು ಗ್ವಾಲಿಯರ್‌ಗೆ 25 ಮೈಲಿ ದೂರದಲ್ಲಿರುವ 'ಬೇಹಟ್' ಎಂಬ ಹಳ್ಳಿಯಲ್ಲಿ; 1506ರಲ್ಲಿ. ತಂದೆ ಹೆಸರು ಮಕರಂದ ಪಾಂಡೆ. ಕೆಲವರು ಅವರನ್ನು ಮುಕುಂದರಾಮ ಪಾಂಡೆ ಎಂದು ಕರೆಯುತ್ತಿದ್ದರು. ಮಕರಂದ ಪಾಂಡೆ ಉತ್ತಮ ಗಾಯಕರು. ಅವರದು ಸುಖಜೀವನವಾಗಿತ್ತಾದರೂ ಸಂತೃಪ್ತಿಯಿರಲಿಲ್ಲ. ಅವರ ಎಲ್ಲ ಮಕ್ಕಳು ತೀರಿಕೊಂಡಿದ್ದವು. ಅವರಿಗೆ ಅತೀವ ದುಃಖವಾಗಿತ್ತು. ಗ್ವಾಲಿಯರದಲ್ಲಿರುವ ಮುಸಲ್ಮಾನ ಫಕೀರ ಹಜರತ್ ಮಹಮ್ಮದ ಗೌಸರ ದರ್ಶನಾಶೀರ್ವಾದ ಪಡೆದರೆ ದೀರ್ಘಾಯುಷಿ ಸಂತಾನ ಪ್ರಾಪ್ತವಾಗುತ್ತದೆಂದು ಮಕರಂದ ಪಾಂಡೆಗೆ ಯಾರೋ ಒಬ್ಬರು ಹೇಳಿದರು. ಮಕರಂದ ಪಾಂಡೆ ಗ್ವಾಲಿಯರಕ್ಕೆ ಬಂದು ಮಹಮ್ಮದ ಗೌಸರನ್ನು ಕಂಡು ತಮ್ಮ ಅಳಲನ್ನು

ಅರುಹಿದರು. ಗೌಸರು ಒಂದು ತಾಯ್ತುವನ್ನು ಕೊಟ್ಟು; ಅದನ್ನು ಹೆಂಡತಿಯ ಕೊರಳಿಗೆ ಕಟ್ಟಬೇಕೆಂದು ಹೇಳಿದರು. ಹಾಗೆ ಮಾಡಿದರೆ ತಮ್ಮ ಇಷ್ಟಾರ್ಥ ಈಡೇರುವುದೆಂದು ಹೇಳಿದರು. ಮಕರಂದ ಪಾಂಡೆ ಹಾಗೆ ಮಾಡಿದರು. ವರ್ಷದಲ್ಲಿ ಒಂದು ಗಂಡು ಮಗು ಪಡೆದರು. ಹುಟ್ಟಿದ ಮಗುವಿಗೆ 'ರಾಮತನು' ಎಂದು ನಾಮಕರಣ ಮಾಡಿದರು.

ಇನ್ನೊಂದು ಅಭಿಪ್ರಾಯದ ಪ್ರಕಾರ ಗೌಡ ಬ್ರಾಹ್ಮಣ ವಂಶದ ಪಾಂಡೆ ಮನೆತನದ ಮಕರಂದ–ಕಮಲಾ ದಂಪತಿಗಳಿಗೆ ಬಹುದಿನಗಳಿಂದ ಮಕ್ಕಳಿರಲಿಲ್ಲ. ಈಶ್ವರನಿಗೆ ಪ್ರತಿದಿನ ಆಡಿನ ಹಾಲಿನ ಅಭಿಷೇಕ, ಬಿಲ್ವಾರ್ಚನೆ ಸಲ್ಲಿಸಿದರೆ ಸಂತಾನ ಪ್ರಾಪ್ತಿಯೆಂದು ಯಾರೋ ಸತ್ಪುರುಷರು ಈ ದಂಪತಿಗಳಿಗೆ ಹೇಳಿದರು. ದಂಪತಿಗಳು ಶ್ರದ್ಧೆಯಿಂದ ಹಾಗೇ ಮಾಡಿದರು. ಗಂಡು ಮಗುವನ್ನು ಪಡೆದರು. ಮಗುವಿಗೆ 'ತ್ರಿಲೋಚನ' ಎಂದು ಹೆಸರಿಟ್ಟರು. ಪ್ರೀತಿಯಿಂದ 'ರಾಮತನು' 'ತನ್ನಾಮಿಶ್ರ' ಎಂದು ಕರೆದರು. ಆದರೆ ಮಗು ಹುಟ್ಟುವಾಗಲೆ ಮೂಕವಾಗಿತ್ತು. ಹೆತ್ತವರಿಗೆ ಮತ್ತೆ ಚಿಂತೆಯಾಯಿತು. ಗ್ವಾಲಿಯರದ ಮಹಮ್ಮದ ಗೌಸರ ದರ್ಶನಾಶೀರ್ವಾದ ಪಡೆದರೆ ಮಗು ಮಾತನಾಡ ಬಹುದೆಂದು ಯಾರೋ ಪಾಂಡೆಯವರಿಗೆ ಹೇಳಿದರು. ಪಾಂಡೆ ಮಗುವನ್ನು ಮಹಮ್ಮದ ಗೌಸರ ಹತ್ತಿರ ಗ್ವಾಲಿಯರಕ್ಕೆ ಕರೆತಂದರು. ಮಹಮ್ಮದ ಗೌಸರು ತ್ರಿಲೋಚನನ ಬಾಯಿಗೆ ತನ್ನ ಎಂಜಲು ಅಡಿಕೆ ಹಾಕಿದರು. ಮುಸಲ್ಮಾನನೊಬ್ಬ ತನ್ನ ಮಗನಿಗೆ ಎಂಜಲು ತಿನ್ನಿಸಿದನೆಂದು ಪಾಂಡೆಗೆ ಹೇಸಿಗೆ ಎನಿಸಿತು. ಆದರೆ ತ್ರಿಲೋಚನನಿಗೆ ಬಾಯಿ ಬಂದಿತು.

ಬಾಲ್ಯಾವಸ್ಥೆಯಲ್ಲಿ ತ್ರಿಲೋಚನ ಬಹು ತೀಕ್ಷ್ಣ ಹಾಗೂ ಕುಶಲಮತಿಯಾಗಿದ್ದ. ಆದರೆ ಅಭ್ಯಾಸದಲ್ಲಿ ಆತನಿಗೆ ಆಸಕ್ತಿಯಿರಲಿಲ್ಲ. ಯಾವುದೇ ಪ್ರಾಣಿಯ ಧ್ವನಿಯನ್ನು ತದ್ರೂಪವಾಗಿ ಪ್ರತಿಧ್ವನಿಸುತ್ತಿದ್ದ. ಇದ್ದೊಬ್ಬ ಮಗನಿಗೆ ಪಾಲಕರು ತುಂಬಾ ಮುದ್ದಾಗಿ ಸಾಕಿದ್ದರಿಂದ ಆತನ ತುಂಟಾಟಿಕ ಹೆಚ್ಚಾಗಿತ್ತು.

ಒಮ್ಮೆ ಸ್ವಾಮಿ ಹರಿದಾಸರು ತಮ್ಮ ಶಿಷ್ಯರೊಂದಿಗೆ ಅರಣ್ಯ ಮಧ್ಯದಿಂದ ಕಾಶಿ ಯಾತ್ರೆಗೆ ಹೊರಟಿದ್ದರು. ಅವರನ್ನು ನೋಡಿದ ರಾಮತನು ಅವರನ್ನು ಅಂಜಿಸಬೇಕೆಂದು ಗಿಡದ ಮರೆಯಲ್ಲಿ ನಿಂತು ಸಿಂಹಘರ್ಜನೆ ಮಾಡಿದ. ಅವರು ಆ ಧ್ವನಿಯನ್ನು ಕೇಳಿ ಸಿಂಹವೇ ಬಂತೆಂದು ಗಾಬರಿಯಾದರು, ಅತ್ತಿತ್ತ ನೋಡಿದರು, ಗಿಡದ ಮರೆಯಲ್ಲಿ ಸಿಂಹಘರ್ಜನೆ ಮಾಡುತ್ತಿದ್ದ ಬಾಲಕನನ್ನು ಕಂಡರು. ಶಿಷ್ಯರು

ಅವನನ್ನು ಹಿಡಿದು ಸ್ವಾಮಿ ಹರಿದಾಸರ ಮುಂದೆ ತಂದು ನಿಲ್ಲಿಸಿದರು. ಬಾಲಕನ ಅಸಾಧಾರಣ ಧ್ವನಿ ಅನುಕರಣಾಶಕ್ತಿಯನ್ನು ಕಂಡು ಸ್ವಾಮಿ ಹರಿದಾಸರು ಆಶ್ಚರ್ಯಚಕಿತರಾದರು. ಪ್ರಾಣಿಗಳ ಧ್ವನಿಯನ್ನೇ ಈ ರೀತಿ ಪ್ರತಿಧ್ವನಿಸುತ್ತಿದ್ದರೆ ಸಂಗೀತದಲ್ಲಿ ಆತ ಹೇಗೆ ಹಾಡಬಲ್ಲನೆಂಬುದು ಅವರ ಯೋಚನೆಯಾಗಿತ್ತು. ಅವನ ಅಗಾಧ ಪ್ರತಿಭಾಶಕ್ತಿ ಕಂಡು ಬೆರಗಾದರು. ಅವನನ್ನು ತಮ್ಮ ಶಿಷ್ಯನನ್ನಾಗಿಸಿ ಸಂಗೀತ ಕಲಿಸುತ್ತೇವೆಂದು ಪಾಂಡೆಗೆ ಹೇಳಿ ತ್ರಿಲೋಚನ ನನ್ನು ಅವರು ತಮ್ಮೊಂದಿಗೆ  ಬೃಂದಾವನಕ್ಕೆ ಕರೆದೊಯ್ದು ಸಂಗೀತ ಶಿಕ್ಷಣ ನೀಡಿದರು. ಅಲ್ಲಿ ಅವನು ಹತ್ತು ವರ್ಷ ಸಂಗೀತ ಅಭ್ಯಾಸ ಮಾಡಿದನು.

ಕೆಲ ದಿನಗಳಲ್ಲಿ ತ್ರಿಲೋಚನ ತಾಯಿಯನ್ನು ಕಳೆದುಕೊಂಡ ಬೃಂದಾವನದಿಂದ ಊರಿಗೆ ಮರಳಿದ. ಪಾಂಡೆ ಸಾಯುವ ಮುನ್ನ ಮಗನನ್ನು ಹತ್ತಿರ ಕರೆದು 'ತ್ರಿಲೋಚನ, ನೀನು ಹಜರತ್ ಮಹಮ್ಮದ ಗೌಸರನ್ನು ಎಂದಿಗೂ ಮರೆಯಬೇಡ. ಅವರ ಆಜ್ಞೆ ಮೀರಬೇಡ' ಎಂದು ಹೇಳಿ ಕೊನೆಯುಸಿರೆಳೆದರು. ತ್ರಿಲೋಚನ ಈ ಮಾತುಗಳನ್ನು ತನ್ನ ಜೀವಮಾನದುದ್ದಕ್ಕೂ ಪಾಲಿಸಿಕೊಂಡು ಬಂದ.

ತಂದೆ-ತಾಯಿಯ ಅಗಲಿಕೆಯ ನಂತರ ರಾಮತನು (ತ್ರಿಲೋಚನ) ಬೃಂದಾವನಕ್ಕೆ ಮರಳಿ ಬಂದು ಸ್ವಾಮಿ ಹರಿದಾಸರಿಗೆ ನಡೆದ ಸಂಗತಿಯನ್ನೆಲ್ಲ ತಿಳಿಸಿದ. ಅವರು ಆತನಿಗೆ ಗ್ವಾಲಿಯರಕ್ಕೆ ಹೋಗಿ ಮಹಮ್ಮದಗೌಸರನ್ನು ದರ್ಶನ ಪಡೆಯಲು ಹೇಳಿದರು. ರಾಮತನು ಗ್ವಾಲಿಯರಕ್ಕೆ ಬಂದು ಮಹಮ್ಮದಗೌಸರನ್ನು ಭೇಟಿಯಾದ. ಅವರು ಆತನನ್ನು ತಮ್ಮಲ್ಲಿಯೇ ಇರಲು ಹೇಳಿದರು. ರಾಮತನು ಬೃಂದಾವನ ಬಿಟ್ಟು ಗ್ವಾಲಿಯರದಲ್ಲಿಯೇ ಉಳಿದ. ಅಲ್ಲಿ ಆತನಿಗೆ ಗೌಸರಿಂದ ಸಂಗೀತ ಅಭ್ಯಾಸ ದೊರೆಯಿತು.

ಗ್ವಾಲಿಯರದ ರಾಜಾ ಮಾನಸಿಂಹ ತೋಮರ ಸ್ವತಃ ಧ್ರುಪದ ಗಾಯಕ ಹಾಗೂ ಕಲಾಪ್ರೇಮಿಯಾಗಿದ್ದ. ಆತನ ರಾಣಿ ಮೃಗನಯನಿ ಸಂಗೀತ ವಿದೂಷಿಯಾಗಿದ್ದಳು. ರಾಜಾ ಮಾನಸಿಂಹನ ನಿಧನದ ನಂತರ ಮೃಗನಯನಿ ಪಟ್ಟವೇರಿದಳು. ಅವಳ ಅಪ್ರತಿಮ ಕಂಠಸಿರಿಯ ಬಗೆಗೆ ಕೇಳಿದ್ದ ರಾಮತನುವಿಗೆ ರಾಣಿಯ ಸಂಗೀತ ಕೇಳಬೇಕೆಂಬ ಇಚ್ಛೆಯಾಯಿತು. ಮಹಮ್ಮದ ಗೌಸರ ಮೂಲಕ ರಾಣಿ ಮೃಗನಯನೆಗೆ ಈ ವಿಷಯ ತಿಳಿಸಲಾಯಿತು. ಗೌಸರ ಮೇಲೆ ತುಂಬ ಅಭಿಮಾನಹೊಂದಿದ್ದ ಮೃಗನಯನಿ ರಾಮತನು ನನ್ನು ಅರಮನೆಗೆ ಕರೆಸಿ

ಸಂಗೀತ ಕೇಳಿಸಿದಳು. ಮೃಗನಯನೆಯ ಸಂಗೀತ ಕೇಳಿ ರಾಮತನು ಪ್ರಭಾವಿತನಾದ. ನಿತ್ಯ ಅವಳ ಸಂಗೀತ ಕೇಳಲು ಅರಮನೆಗೆ ಹೋಗುತ್ತಿದ್ದ. ರಾಣಿ ರಾಮತನುನನ್ನು ಮಗನಂತೆ ಕಾಣುತ್ತಿದ್ದಳು. ಮೃಗನಯನೆಯ ಸಖಿಯರಲ್ಲಿ ತುಂಬ ಚಲುವೆಯಾಗಿದ್ದ ಹುಸೇನಿ ಎಂಬುವಳು ಸುಂದರ ಕಂಠದ ಗಾಯಕಿಯಾಗಿದ್ದಳು. ರಾಮತನು ಅವಳ ಪ್ರೇಮಬಂಧನದಲ್ಲಿ ಸಿಲುಕಿದ. ಈ ವಿಷಯ ರಾಣಿಗೂ ತಿಳಿಯಿತು. ಮೃಗನಯನೆ ರಾಮತನು ಮತ್ತು ಹುಸೇನಿಯರ ಮದುವೆ ಮಾಡಿದಳು. ಮದುವೆ ಮಹಮ್ಮದಗೌಸರ ನೇತೃತ್ವದಲ್ಲಿ ನಡೆಯಿತು. ಈ ಸಂದರ್ಭದಲ್ಲಿ ರಾಮತನುವಿಗೆ 'ಮಹಮ್ಮದ್ ಅತಾಅಲಿ' ಎಂದು ಹೆಸರಿಡಲಾಯಿತು.

ಹುಸೇನಿ ಮೂಲತಃ ಹಿಂದೂ ಮಹಿಳೆ ಹಿಂದೂ ಹೆಸರು ಪ್ರೇಮಕುಮಾರಿ. ಅವಳದು ಸಾರಸ್ವತ ಬ್ರಾಹ್ಮಣ ವಂಶ. ಕಾಲಾಂತರದಲ್ಲಿ ಅವರ ಮನೆತನ ಮುಸಲ್ಮಾನ ಧರ್ಮಕ್ಕೆ ಮತಾಂತರ ಹೊಂದಿದ್ದರಿಂದ ಅವಳಿಗೆ ಹುಸೇನಿ ಎಂಬ ಹೆಸರು ಬಂದಿತ್ತು. ಈ ಕಾರಣಕ್ಕಾಗಿ ಅವಳನ್ನು 'ಹುಸೇನಿ ಬ್ರಾಹ್ಮಣಿ' ಎಂದೇ ಕರೆಯಲಾಗುತ್ತಿತ್ತು.

ವಿವಾಹದ ನಂತರ ಮಹಮ್ಮದ್ ಅತಾಅಲಿ ಉರ್ಫ ರಾಮತನು ಮಹಮ್ಮದಗೌಸರ ಆಶೀರ್ವಾದ ಹಾಗೂ ಮೃಗನಯನೆಯ ಹಾರೈಕೆಯೊಂದಿಗೆ ಮತ್ತೆ ಸ್ವಾಮಿ ಹರಿದಾಸರಲ್ಲಿಗೆ ಬೃಂದಾವನಕ್ಕೆ ಬಂದ. ರಾಮತನು ಸ್ವಾಮಿ ಹರಿದಾಸರಿಂದ ಸುಮಾರು ಒಂದುನೂರು ಧ್ರುಪದ ಗೀತಗಳನ್ನು ಅಭ್ಯಾಸ ಮಾಡಿದನು.

ಕೆಲ ದಿವಸಗಳ ನಂತರ ಮಹಮ್ಮದಗೌಸರು ಹಾಸಿಗೆ ಹಿಡಿದರು. ತಮ್ಮ ಅಂತ್ಯ ಕಾಲ ಸಮಿಪಿಸಿದ್ದರಿಂದ ರಾಮತನುವಿಗೆ ಕರೆಕಳಿಸಿದರು. ರಾಮತನು ಬೃಂದಾವನದಿಂದ ಗ್ವಾಲಿಯರಕ್ಕೆ ಬಂದ. ಮಹಮ್ಮದಗೌಸರ ಸೇವೆಯಲ್ಲಿ ನಿರತನಾದ. ಮಹಮ್ಮದಗೌಸರು ತಮ್ಮ ಬಳಿಯಲ್ಲಿದ್ದ ಅಪಾರ ಧನರಾಶಿಯನ್ನು ರಾಮತನೂನಿಗೆ ಕೊಟ್ಟು ಹರಸಿದರು. ಕೆಲವೇ ದಿನಗಳಲ್ಲಿ ಅವರು ಪೈಗಂಬರವಾಸಿಯಾದರು. ನಂತರ ರಾಮತನು ಕೆಲ ದಿವಸ ಅಲ್ಲಿಯೇ ಇದ್ದುಕೊಂಡು ಸಾಧನೆಯಲ್ಲಿ ಮಗ್ನನಾದ.

ಈ ಹೊತ್ತಿಗೆ ರಾಮತನು 'ತಾನಸೇನ' ನೆಂದು ಹೆಸರು ಪಡೆದಿದ್ದ. ಆತನ ಸಂಗೀತದ ಖ್ಯಾತಿ ನಾಲ್ಕು ದಿಕ್ಕಿಗೂ ಹರಡಿತ್ತು. ರೇವಾ ನರೇಶ, ರಾಜಾ ರಾಮಚಂದ್ರ, ಭಘೇಲಾರ ಕಿವಿಗೂ ತಾನಸೇನನ ಖ್ಯಾತಿ ತಲುಪಿತ್ತು. ರಾಜಾ ರಾಮಚಂದ್ರ ಕಲಾಪ್ರೇಮಿಯೂ, ಸ್ವತಃ ಗಾಯಕನೂ ಆಗಿದ್ದ. ಅವನು ಸ್ವಾಮಿ ಹರಿದಾಸರ ಪರಮ ಭಕ್ತ. ರಾಜಾ ರಾಮಚಂದ್ರ ತಾನಸೇನನ ಖ್ಯಾತಿ ಕೇಳಿ ಆತನನ್ನು ತನ್ನಲ್ಲಿಗೆ ಕರೆಸಿಕೊಂಡು ರಾಜಾಶ್ರಯ ನೀಡಿದ.

ಈ ಅವಧಿಯಲ್ಲಿ ಅಕ್ಬರ ಬಾದಶಹ ದೆಹಲಿಯಲ್ಲಿ ರಾಜ್ಯವಾಳುತ್ತಿದ್ದ. ರಾಜಾ ರಾಮಚಂದ್ರನೊಂದಿಗೆ ಆತನ ಸ್ನೇಹವಿತ್ತು. ರಾಮಚಂದ್ರನ ಭೇಟಿಗಾಗಿ ಅಕ್ಬರ ಆಗಾಗ ರೇವಾಕ್ಕೆ ಬರುತ್ತಿದ್ದ. ಹಾಗೆ ಒಮ್ಮೆ ಅಕ್ಬರ ರೇವಾಕ್ಕೆ ಬಂದಾಗ ತಾನಸೇನನ ಅದ್ಭುತ ಸಂಗೀತ ಕೇಳಿ ಪ್ರಭಾವಿತನಾದ. ತಾನಸೇನನನ್ನು ದೆಹಲಿಗೆ ಕರೆದುಕೊಂಡು ಹೋದ.

ಅಕ್ಬರ ಬಾದಶಹ ಸಂಗೀತ ಪ್ರೇಮಿ. ಆತನ ರಾಜ್ಯದಲ್ಲಿ ಕವಿ, ಕಲಾವಿದರಿಗೆ ಅಪಾರ ಗೌರವ ನೀಡಲಾಗಿತ್ತು. ಆತನ ಆಸ್ಥಾನದಲ್ಲಿ ಅನೇಕ ಜನ ಕಲಾವಿದರು, ಪಂಡಿತರು, ಕವಿಗಳು ಆಶ್ರಯ ಪಡೆದಿದ್ದರು. ಮಹಾನ್ ಪಂಡಿತರೆನಿಸಿದ್ದ 'ನವರತ್ನ'ರಿದ್ದರು. ಮೂವತ್ತಾರು ಜನ ಮಹಾನ್ ಸಂಗೀತಗಾರರಿದ್ದರು. ಅವರಲ್ಲಿ ತಾನಸೇನನಿಗೆ ಅಗ್ರಸ್ಥಾನ ದೊರೆಯಿತು. ತಾನಸೇನನ ಸಂಗೀತ ಅಕ್ಬರನಿಗೆ ವಿಶೇಷ ಪರಿಣಾಮ ಬೀರಿತ್ತು. ಹಾಗಾಗಿ ಅಕ್ಬರ ತಾನಸೇನನಿಗೆ 'ಸಂಗೀತ ಸಾಮ್ರಾಟ್', 'ಸಂಗೀತದ ಸೂರ್ಯ', 'ಸಂಗೀತದ ಜಗದ್ಗುರು', 'ವಾಣೀವಿಲಾಸ ಕಂಠಾಭರಣ' ಮುಂತಾದ ಬಿರುದು ನೀಡಿ ಗೌರವಿಸಿದ ಮತ್ತು ತನ್ನ ಕೊರಳೊಳಗಿನ ಅತ್ಯಂತ ಬೆಲೆಬಾಳುವ ವಜ್ರದ ಹಾರವನ್ನೇ ಕಾಣಿಕೆಯಾಗಿ ಕೊಟ್ಟ. ತಾನಸೇನನ ಕೊರಳೊಳಗಿನ ಹಾರವನ್ನು ಕಂಡು ದರಬಾರದ ಇತರ ಗಾಯಕರು ಅಸೂಯೆಪಟ್ಟರು. ಈ ವರ್ತನೆ ತಾನಸೇನನಿಗೆ ಸರಿಕಾಣಲಿಲ್ಲ ಹಾಗಾಗಿ ತಾನಸೇನ ಆ ಹಾರವನ್ನು ಮಾರಿದ. ಈ ಸುದ್ದಿ ಅಕ್ಬರನಿಗೆ ತಿಳಿಯಿತು. ಆತ ತಾನಸೇನನನ್ನು ಕರೆಸಿ, ತಾನು ಕೊಟ್ಟ ಹಾರ ಎಲ್ಲಿ? ಎಂದು ವಿಚಾರಿಸಿದ. ಅದು ಕಳೆದುಹೋಯಿತು ಜಹಾಪನಾ! ಎಂದು ತಾನಸೇನ ಉತ್ತರಿಸಿದ. ಆ ಹಾರ ತಂದರೆ ಮಾತ್ರ ಇಲ್ಲಿ ನಿನಗೆ ಸ್ಥಾನ. ಇಲ್ಲದಿದ್ದರೆ ಇಲ್ಲಿ ಸ್ಥಾನವಿಲ್ಲವೆಂದು ಅಕ್ಬರ ಆಜ್ಞಾಪಿಸಿದ ತಾನಸೇನನಿಗೆ ಚಿಂತೆಯಾಯಿತು. ಈ ಸಮಯದಲ್ಲಿ ಆತನಿಗೆ ನೆನಪಾದುದು ಆತನ ಪರಮ ಮಿತ್ರ ಹಾಗೂ ಕಲಾಭಿಮಾನಿ ರಾಜಾರಾಮಚಂದ್ರನದು. ತಾನಸೇನ ರಾಮಚಂದ್ರನಲ್ಲಿ ಹೋಗಿ ನಡೆದ ಸಂಗತಿಯನ್ನೆಲ್ಲ ತಿಳಿಸಿದ.

ರಾಜಾರಾವ ಂಚಂದ್ರ ಸಹೃದಯಿ ಅರಸನಾಗಿದ್ದ. ವಿಷಯುವೆಲ್ಲ ತಿಳಿದುಕೊಂಡ. ತನ್ನ ಮನಃತೃಪ್ತಿಗಾಗಿ ಹಾಡಬೇಕೆಂದು ತಾನಸೇನನನ್ನು ಕೇಳಿದ. ತಾನಸೇನ ಅದ್ಭುತವಾಗಿ ಹಾಡಿದ. ರಾಜಾರಾಮಚಂದ್ರ ತಾನಸೇನನ ಸಂಗೀತ ಕೇಳಿ ಸಂತುಷ್ಟನಾದ. ರತ್ನ ಖಚಿತವಾದ ತನ್ನ ಪಾದುಕೆಗಳನ್ನೇ ತಾನಸೇನನಿಗೆ ಪ್ರೀತಿಯಿಂದ ಕೊಟ್ಟ. ಆಗಿನ ಕಾಲದಲ್ಲಿ ಅವುಗಳ ಬೆಲೆ ಸುಮಾರು ಐವತ್ತು ಲಕ್ಷ ರೂಪಾಯಿಗಳು.

ಪಾದುಕೆಗಳೊಂದಿಗೆ ತಾನಸೇನ ದೆಹಲಿಗೆ ಬಂದು ಅಕ್ಬರನಿಗೆ, 'ಇದರಲ್ಲಿ ತಮ್ಮ ಹಾರದ ಬೆಲೆಯಷ್ಟನ್ನು ತೆಗೆದುಕೊಂಡು ಉಳಿದದ್ದನ್ನು ತನಗೆ ಹಿಂದಿರುಗಿಸಬೇಕೆಂದು' ಪ್ರಾರ್ಥಿಸಿದ. ಈ ದೃಶ್ಯವನ್ನು ನೋಡಿದ ಅಕ್ಬರ 'ತಾನಸೇನ, ಈ ರತ್ನ ಖಚಿತ ಪಾದುಕೆಗಳು ನಿನ್ನ ಏಳು ಸ್ವರದಲ್ಲಿ ಒಂದು ಸ್ವರಕ್ಕೂ ಸಮನಾಗಿಲ್ಲ' ಎಂದು ಹೇಳಿದ.

ತಾನಸೇನನಿಗೆ ಸುರತಸೇನ, ಶರತಸೇನ, ತರಂಗಸೇನ, ಬಿಲಾಸಖಾನ್ ಎಂಬ ನಾಲ್ಕು ಜನ ಗಂಡು, ಸರಸ್ವತಿ ಎಂಬ ಹೆಸರಿನ ಒಬ್ಬ ಹೆಣ್ಣು ಮಗಳು– ಒಟ್ಟು ಐದು ಜನ ಮಕ್ಕಳು. ಅವರೆಲ್ಲರೂ ನಾದ ವಿದ್ಯೆಯಲ್ಲಿ ಪ್ರಾವೀಣ್ಯತೆ ಪಡೆದಿದ್ದರು. ಬಿಲಾಸಖಾನ್ ತಂದೆಯಂತೆ ಹೆಸರು ಪಡೆದಿದ್ದ, ಗಾಯಕನಾಗಿದ್ದ.

ತಾನಸೇನರ ಸಂಗೀತ ಅತ್ಯಂತ ಪ್ರಭಾವಪೂರ್ಣವಾಗಿತ್ತು. ಚೇತನ, ಜಡವಸ್ತುಗಳ ಮೇಲೂ ಅದರ ಪ್ರಭಾವ ಅಧಿಕವಾಗಿತ್ತು. ತಾನಸೇನ ಹಾಡಿದ ದೀಪಕ ರಾಗದಿಂದ ದೀಪ ಬೆಳಗುತ್ತಿತ್ತು. ಮೇಘ ರಾಗದಿಂದ ಮಳೆ ಸುರಿಯುತ್ತಿತ್ತು.

ಒಮ್ಮೆ ಅಕ್ಬರನಿಗೆ ತಾನಸೇನನಿಂದ ದೀಪಕ ರಾಗ ಕೇಳಬೇಕೆನಿಸಿತು. ಅಕ್ಬರ ತನ್ನ ಇಚ್ಛೆಯನ್ನು ತಾನಸೇನನಿಗೆ ತಿಳಿಸಿದ. ತಾನಸೇನ ಮೊದಮೊದಲು ಅದನ್ನು ತಿರಸ್ಕರಿಸಿದನಾದರೂ ಬಾದಶಹನ ಪ್ರೀತಿಯನ್ನು ಅಲ್ಲಗಳೆಯುವ ಮನಸ್ಸಿರಲಿಲ್ಲ. ತಾನಸೇನ ದೀಪಕ ರಾಗ ಹಾಡಲು ಸಿದ್ಧನಿದ್ದ. ಆದರೆ ಮೇಘ ರಾಗ ಹಾಡುವ ಸಾಮರ್ಥ್ಯ ಉಳ್ಳವರಿಗಾಗಿ ಆತ ಕಾಯುತ್ತಿದ್ದ.ಇದೇ ಅವಧಿಯಲ್ಲಿ ತನ್ನ ಮಗಳು ಸರಸ್ವತಿ ಹಾಗೂ ಸ್ವಾಮಿ ಹರಿದಾಸರ ಶಿಷ್ಯೆ ರೂಪವತಿಗೆ ಮೇಘ ರಾಗವನ್ನು ಹೇಳಿಕೊಟ್ಟ. ತಾನಸೇನ ದೀಪಕ ರಾಗ ಹಾಡಲು ಆರಂಭಿಸಿದ. ಅಲ್ಲಿಯ ವಾತಾವರಣದಲ್ಲಿ ಒಂದು ರೀತಿಯ ಬಿಸಿಗಾಳಿ ಆವರಿಸಿತು. ಎಲ್ಲರೂ ಬೆವರಿನಿಂದ ತೊಂದರೆಗೊಳಗಾದರು. ಇಡೀ ಪರಿಸರ ಉಷ್ಣತೆಯಿಂದ ಕೂಡಿತು.